## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 159 |
| ಸದಸ್ಯರ ಹೆಸರು | : | ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 10.12.2024 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| (ಅ) | ಕಲಬುರಗಿ ನಗರದ ಹಿರಾಪೂರ್ ಕ್ರಾಸ್ ಪಕ್ಕದಲ್ಲಿ (ಸರ್ವೆ ನಂ.2012) ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ (KUDA) ಬಡಾವಣೆಯಲ್ಲಿ ಮಕ್ಕಳಿಗಾಗಿ ಕಾಯ್ದಿರಿಸಿದ ಪಾರ್ಕ್ ಸ್ಥಳದಲ್ಲಿ ದೊಡ್ಡದಾದ ಸೆಪ್ಟಿಕ್ ಟ್ಯಾಂಕ್ ಕಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕಲಬುರಗಿ ನಗರದ ಹಿರಾಪೂರ ಸರ್ವೆ ನಂ. 20/2 ರಲ್ಲಿ(KUDA) ವತಿಯಿಂದ ರಚಿಸಲಾಗಿರುವ ಬಡಾವಣೆಯಲ್ಲಿ ಸೆಪ್ಟಿಕ್‌ಟ್ಯಾಂಕ್ ನಿರ್ಮಿಸಿರುವ ಸ್ಥಳವು ಪಾರ್ಕಿಗಾಗಿ ಕಾಯ್ದಿಸಿರುವುದಿಲ್ಲ. |
| (ಆ) | ಸೆಪ್ಟಿಕ್ ಟ್ಯಾಂಕ್ ಪಕ್ಕದಲ್ಲಿಯೇ ಕುಡಾ (KUDA) ಬಡಾವಣೆಯಲ್ಲಿ ಮನೆ ಕಟ್ಟಿಕೊಂಡು ವಾಸಿಸುತ್ತಿರುವ ಕುಟುಂಬಗಳು ಸೆಪ್ಟಿಕ್ ಟ್ಯಾಂಕ್‌ನ ದುರ್ವಾಸನೆಯಿಂದ ಹಲವಾರು ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿರುವುದಕ್ಕೆ ಹೊಣೆ ಯಾರು; | (KUDA) ವತಿಯಿಂದ ಸದರಿ ಸೆಪ್ಟಿಕ್‌ಟ್ಯಾಂಕ್‌ನ್ನು ನಿರ್ಮಿಸಲಾಗಿದ್ದು, ಸದರಿ ಬಡಾವಣೆಯನ್ನು ದಿನಾಂಕ: 15.09.2012ರಲ್ಲಿ ಮಹಾನಗರ ಪಾಲಿಕೆಗೆ ಹಸ್ತಾಂತರಿಸಲಾಗಿದ್ದರೂ, ಕಲಬುರಗಿ ನಗರದ ಸಂಪೂರ್ಣ ಒಳಚರಂಡಿ ವ್ಯವಸ್ಥೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನಿರ್ವಹಿಸಲಾಗುತ್ತಿತ್ತು.<br><br>ಪ್ರಸ್ತುತ ಸದರಿ ಒಳಚರಂಡಿ ವ್ಯವಸ್ಥೆ ನಿರ್ವಹಣೆಯು ದಿನಾಂಕ: 01.06.2023 ರಿಂದ ಮಹಾನಗರ ಪಾಲಿಕೆಗೆ ಹಸ್ತಾಂತರಗೊಂಡಿದ್ದು, ಸದರಿ ಬಡಾವಣೆಯ ಯು.ಜಿ.ಡಿ ನೀರು, ಸೆಪ್ಟಿಕ್ ಟ್ಯಾಂಕ್ ಗೆ ಹೋಗುವುದನ್ನು ಕಡಿತಗೊಳಿಸಿ ಯು.ಜಿ.ಡಿ ಪೈಪ್‌ಲೈನ್ ಗೆ ಸಂಪರ್ಕ ಕಲ್ಪಿಸಿ, ಸೆಪ್ಟಿಕ್ ಟ್ಯಾಂಕ್‌ನ್ನು ನೆಲಸಮಗೊಳಿಸಲು ಕ್ರಮವಹಿಸಲಾಗುವುದು. |
| (ಇ) | ಸೆಪ್ಟಿಕ್ ಟ್ಯಾಂಕ್ ತಗ್ಗು ಪ್ರದೇಶದಲ್ಲಿದ್ದು ಮಳೆಯ ನೀರು, ಚರಂಡಿ ನೀರು ಅದರ ಪಕ್ಕದಲ್ಲಿಯೇ ಕೆರೆಯಂತೆ ಸಂಗ್ರಹವಾಗಿ ಬಡಾವಣೆ ನಿವಾಸಿಗಳು ಜೀವನ ನಡೆಸುವುದೇ ದುಸ್ತರವಾಗಿದ್ದು ಇದಕ್ಕೆ ಜಿಲ್ಲಾಡಳಿತ ಮತ್ತು ಕೂಡಾ (KUDA) | ಸದರಿ ಸೆಪ್ಟಿಕ್‌ಟ್ಯಾಂಕ್ ಮಳೆ ನೀರು ಚರಂಡಿಯ ಪಕ್ಕದಲ್ಲಿದ್ದು ಮಳೆ ಗಾಲದಲ್ಲಿ ಚರಂಡಿಯು ತುಂಬಿಕೊಂಡು ಸೆಪ್ಟಿಕ್‌ಟ್ಯಾಂಕ್‌ನ ಸ್ಥಳದಲ್ಲಿ ನೀರು ಸಂಗ್ರಹಣೆಯಾಗುತ್ತಿದೆ. ಈಗಾಗಲೇ ಕಚ್ಚಾ ಮಳೆ ನೀರು ಚರಂಡಿಯಲ್ಲಿನ ಮಣ್ಣನ್ನು ತೆಗೆದು ಸುತ್ತ ಮುತ್ತಲಿನ ಪ್ರದೇಶದಲ್ಲಿ |

| | | |
|---|---|---|
| | ಅಧಿಕಾರಿಗಳು ಕೈಗೊಂಡ ಕ್ರಮಗಳೇನು: | ಗಿಡಗಂಟಿಗಳನ್ನು ಸ್ವಚ್ಛಗೊಳಿಸಲಾಗಿರುತ್ತದೆ: ಸದರಿ ಕಚ್ಚಾ ನಾಲೆಯನ್ನು ಸಿಸಿ ಚರಂಡಿಯಾಗಿ ನಿರ್ಮಿಸಲು ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆ 2024-29ರ ಕ್ರಿಯಾ ಯೋಜನೆಯಲ್ಲಿ ಅಳವಡಿಸಲಾಗಿರುತ್ತದೆ. |
| (ಈ) | ಸೆಪ್ಟಿಕ್ ಟ್ಯಾಂಕ್ ದುರಸ್ತಿ ಸರಿಪಡಿಸಿ ಬಡಾವಣೆ ನಿವಾಸಿಗಳಿಗೆ ನೆಮ್ಮದಿಯಿಂದ ಬದುಕಲು ಅವಕಾಶ ಮಾಡಿಕೊಡಲು ತಕ್ಷಣವೇ ಯಾವ ಕ್ರಮ ಕೈಗೊಳ್ಳಲಾಗುವುದು? | ಸದರಿ ಬಡಾವಣೆಯ ಯು.ಜಿ.ಡಿ ನೀರು ಸೆಪ್ಟಿಕ್ ಟ್ಯಾಂಕ್‌ಗೆ ಹೋಗದಂತೆ ಸಂಪರ್ಕವನ್ನು ಕಡಿತಗೊಳಿಸಿ, STP ಗೆ ಹೋಗುವ ಯು.ಜಿ.ಡಿ ಪೈಪ್ ಲೈನ್ ಗೆ ಸಂಪರ್ಕ ಮಾಡಲು ಮುಂಬರುವ ಪಾಲಿಕೆಯ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಳ್ಳಲು ಕ್ರಮವಹಿಸಲಾಗುವುದು. |

ನಅಇ 89 ಎಸಿಜಿ 2024(ಇ)

**(ಬಿ.ಎಸ್.ಸುರೇಶ)**
ನಗರಾಭಿವೃದ್ಧಿ ಹಾಗೂ ನಗರ ಯೋಜನೆ
ಸಚಿವರು.